ಸಿ.ಸಿ.ನಂಃ 611-2013
ಪಿ.ಡಬ್ಲೂಃ 3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋದಿಸಲಾಯಿತು. ದಿನಾಂಕಃ 01-04-2016.

ಮುಂದುವರಿದ ಮುಖ್ಯ ವಿಚಾರಣೆಃ ಸ.ಸ.ಅ ರವರಿಂದಃ-

ಆರೋಪಿತನಿಗೆ ನಾನು ಸಿಂಡಿಕೇಟ ಬ್ಯಾಂಕನ ನನ್ನ ಖಾತೆಗೆ ಸಂಬಂಧಪಟ್ಟಂತೆ ಚೆಕ್ ನಂ.413610 ಯನ್ನು ನೀಡಿರುತ್ತೇನೆ. ಆ ಚೆಕ್ಕನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕ್ರಾರು ಎಬ್ಬಿಸಿರುತ್ತಾರೆ. ಅವರ ಪ್ರಕಾರ ಚೆಕ್ಕನ್ನು ನಿಶಾನೆಯಾಗಿ ಗುರುತಿಸಬಹುದು ಆದರೆ ಅದರಲ್ಲಿ ಬರೆದಿರುವ ಅಂಶದ ಬಗ್ಗೆ ನಮಗೆ ತಕ್ರಾರು ಇದೆ ಎಂದು ತಕ್ರಾರು ಎಬ್ಬಿಸಿರುತ್ತಾರೆ. ರುಜುವಾತುಪಡಿಸುವ ಶರತ್ತಿಗೊಳಪಟ್ಟು ಸದ್ರಿ ಚೆಕ್ಕನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಗುರುತಿಸುತ್ತೇನೆ. ಸದ್ರಿ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ನನ್ನ ತಮ್ಮ ಆರೋಪಿತನಿಗೆ ನೀಡಿದ ಚೆಕ್ಕನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಯ ಆ ಚೆಕ್ಕನ್ನು ನೋಡಿ ಗುರುತಿಸಿದ್ದು ಸದ್ರಿ ಚೆಕ್ಕನ್ನು ತಕ್ರಾರಿಗೊಳಪಟ್ಟು ನಿ.ಪಿ-5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಡಿ.ಆರ್ ವಕೀಲರಿಂದ ;-

(ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.